ಈ ಭಾಗದ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾರ್ಪಡಿಸುವ ಕಾಮಗಾರಿಯನ್ನು 45 ಲಕ್ಷ ರೂ. ಗಳ ಅಂದಾಜಿನಲ್ಲಿ ಡಿಸೆಂಬರ್ 1986ರಲ್ಲಿ ತೆಗೆದುಕೊಳ್ಳಲಾಯಿತು.

ಈ ಕಾಮಗಾರಿಯಲ್ಲಿ ಮಂಡ್ಯ ನಗರದಲ್ಲಿ 4 ಕಿ.ಮೀ. ರಸ್ತೆಯನ್ನು ಮಧ್ಯದಲ್ಲಿ, ಒಂದು ಮೀಟರ್ ಅಗಲದ ವಿಭಾಜಕವನ್ನು (Median) ಮಾಡಿ, ಎರಡು ಬದಿಯ ರಸ್ತೆಗಳನ್ನು ಅಗಲಪಡಿಸಿ, ಒಟ್ಟು ನಾಲ್ಕು ಪಥದ ಸಂಚಾರಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆ ಮಾಡಲಾಗಿದೆ. ಬಹುತೇಕ ಕಾಮಗಾರಿಯು ಮುಗಿದಿದ್ದು ಈಗಾಗಲೇ 51 ಲಕ್ಷ ರೂ.ಗಳ ವೆಚ್ಚವಾಗಿದೆ. ಇತ್ತೀಚಿನ ಮಳೆಗಾಲದಲ್ಲಿ, ಹಾಗೂ ಕುಡಿಯುವ ನೀರಿನ ಸರಬರಾಜು ಕೊಳವೆಗಳು ಅಲ್ಲಲ್ಲಿ ಹಾನಿಗೊಳಗಾಗಿ ಸೋರು ನೀರಿನಿಂದ ರಸ್ತೆಯಲ್ಲಿ ಗುಂಡಿಗಳಾಗಿದ್ದು ಈಗ ದುರಸ್ಥಿ ಪಡಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಈ ಭಾಗದ ರಸ್ತೆಗೆ ಪೂರ್ಣವಾಗಿ ಡಾಂಬರು ಹಾಕುವ ಮುಂಚೆ ನೀರು ಸರಬರಾಜು ಕೊಳವೆಗಳನ್ನು ಸ್ಥಳಾಂತರಿಸಬೇಕಿದ್ದು ಸಂಬಂಧಪಟ್ಟವರೊಡನೆ ಶೀಘ್ರ ಕ್ರಮಕ್ಕಾಗಿ ಒತ್ತಾಯಿಸಲಾಗುತ್ತಿದೆ.

ಅಪಘಾತಗಳನ್ನು ತಡೆಯುವ ಸಲುವಾಗಿ ಸೂಕ್ತ ಎಚ್ಚರಿಕೆ ಫಲಕಗಳು, ಪ್ರತಿಫಲನ ಬಣ್ಣದಿಂದ ಗುರುತುಗಳನ್ನು (Reflectors) ಹಾಕಲಾಗಿದೆ. ಮಂಡ್ಯ ನಗರಪೋಲೀಸ್ ಇಲಾಖೆಯ ವರದಿ ಪ್ರಕಾರ, ರಸ್ತೆಯಲ್ಲಿ, ವಿಭಾಜಕವನ್ನು ಹಾಕಿ ಜೋಡಿ ರಸ್ತೆ ಮಾಡಿದ ಬಳಿಕ ಅಪಘಾತಗಳು ಕಮ್ಮಿಯಾಗಿದೆ ಎಂದು ತಿಳಿದು ಬಂದಿದೆ. ಇದು ಸಂತೋಷದ ವಿಷಯ ಮತ್ತು ಕೆಲಸ ಫಲದಾಯಕ.

ನಗರ ಪ್ರದೇಶದಲ್ಲಿ ರಸ್ತೆ ದೀಪಗಳನ್ನು ಒದಗಿಸುವ ಹಾಗೂ ನಿರ್ವಹಿಸುವ ವಿಚಾರವು ಮಂಡ್ಯ ನಗರ ಸಭೆಯ ವ್ಯಾಪ್ತಿಗೆ ಬರುವುದರಿಂದ, ಲೋಕೋಪಯೋಗಿ ಇಲಾಖೆಯ ವತಿಯಿಂದ ರಸ್ತೆ ದೀಪಗಳನ್ನು ಅಳವಡಿಸುವ ವಿಷಯವು ಪ್ರಸ್ತಾಪದಲ್ಲಿ ಇರುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಸಮಪದಗಳೆಂದು ಪರಿಗಣಿಸುವ ಸಮಿತಿಯ ಕಾರ್ಯವೈಖರಿ.

ಡಾ. ಆರ್.ಬಿ. ಚೌಧುರಿ : ಮಾನ್ಯ ಉಪಾಧ್ಯಕ್ಷಣೆಯವರೇ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಳ ಸಮಪದಗಳೆಂದು ಪರಿಗಣಿಸುವ ಸಮಿತಿಯನ್ನು ರಚಿಸಿ ಎರಡು ವರ್ಷಗಳಾದರೂ ಈ ಸಮಿತಿಯು ಇನ್ನೂವರೆವಿಗೂ ಕಾರ್ಯವನ್ನು ಮುಗಿಸಿಲ್ಲ. ಹಾಗೂ ಸುಮಾರು 1 ವರ್ಷದಿಂದ ಸಮಿತಿ ಸಭೆಗಳನ್ನೇ ನಡೆಸಿಲ್ಲ. ಇದಲ್ಲದೆ ಮೂರು ಉಪಸಮಿತಿಗಳನ್ನು ಮಲೇರು-ಮಾಲೇರು,ಜಾತಿಗಳ ಬಗ್ಗೆ ಒಂದು ಸಮಿತಿ, ಜೇನು ಕುರುಬ, ಕಾಡು ಕುರುಬ, ಜಾತಿಗಳ ಬಗ್ಗೆ ಒಂದು ಸಮಿತಿ, ಹಾಗೂ ಇತರೇ ಜಾತಿಗಳ ಬಗ್ಗೆ ಒಂದು ಸಮಿತಿ-ಹೀಗೆ ಮೂರು ಉಪಸಮತಿಗಳನ್ನು ರಚಿಸಿ ದಿನಾಂಕ 28 -2-91ರೊಳಗೆ ಮುಖ್ಯ ಸಮಿತಿಗೆ ವರದಿ ಸಲ್ಲಿಸಬೇಕೆಂದು ತೀರ್ಮಾನಿಸಲಾಗಿದ್ದು, ಈ ಮೂರು ಉಪಸಮಿತಿಗಳು ತಮ್ಮ ವರದಿಗಳನ್ನು ಸಲ್ಲಿಸಿದ ಯಾವುದೇ ಮಾಹಿತಿ ಇಲ್ಲ. ಹಾಗೂ ಮುಖ್ಯ ಸಮಿತಿ ಕೂಡ 1991ನೇ ಮೇ ತಿಂಗಳಲ್ಲೇ ಈ ಕಾರ್ಯವನ್ನು ಪೂರ್ತಿಗೊಳಿಸುವುದೆಂದು ತೀರ್ಮಾನಿಸಲಾಗಿತ್ತು. ಆದರೆ ಈವರೆಗೂ ಈ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಆದ್ದರಿಂದ ಸರಕಾರ ಈ ಸಮಿತಿಯ ಸಭೆಯನ್ನು ಕರೆಯಲಾಗಿಲ್ಲ. ಆದ್ದರಿಂದ

ಸರಕಾರ ಈ ಸಮಿತಿಯ ಕಾರ್ಯವನ್ನು ಪೂರೈಸುವುದೇ? ಪೂರೈಸುವುದಾದರೆ ಯಾವಾಗ? ಇಲ್ಲವೆ ಪೂರ್ತಿಯಾಗಿ ಕೈಬಿಡಲಾಗಿದೆಯೇ? ಯಾವುದಕ್ಕೂ ಸರಕಾರ ಸರಿಯಾದ ಹೇಳಿಕೆಯನ್ನು ನೀಡಬೇಕೆಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೇ,

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಅಥವಾ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಲ್ಲಿ ಇರುವ ಜಾತಿಗಳ ಸಮಾನ ಜಾತಿಯೆಂದು ಪರಿಗಣಿಸಬೇಕೆಂದು, ಕೋರಿ ಹಲವಾರು ಜಾತಿಗೆ ಸೇರಿದೆ ಜನರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಹಾಗೂ, ಇನ್ನೂ ಸಲ್ಲಿಸುತ್ತಲೂ ಇದ್ದಾರೆ. ಈ ಮನವಿಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ನೇಮಿಸಿದ ಸಮಿತಿಯನ್ನು ದಿನಾಂಕ 5-1-91ರಲ್ಲಿ ಆಗಿನ ಕಾನೂನು ಸದಸ್ಯರು, ವಿಧಾನ ಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಇತರ ಗಣ್ಯ ವ್ಯಕ್ತಿಗಳನ್ನು ಒಳಗೊಂಡಂತೆ ಪುನರ್ ರಚಿಸಲಾಯಿತು. ಈ ಸಮಿತಿಗೆ ಪೂರಕವಾಗಿ 3 ಉಪ ಸಮಿತಿಗಳನ್ನು ರಚಿಸಲಾಗಿದೆ. ಮಾಲೆಯರು ಮತ್ತು ಮಲೆಯರು ಜಾತಿ ಬಗ್ಗೆ ಶ್ರೀ ಕಾಗೋಡು ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿಯೂ, ಕುರುಬ, ಜೇನು ಕುರುಬ, ಕಾಡುಕುರುಬ ಜಾತಿ ಬಗ್ಗೆ ಶ್ರೀ ಶ್ರೀನಿವಾಸಪ್ರಸಾದ್, ಲೋಕಸಭಾ ಸದಸ್ಯರು ಇವರ ಅಧ್ಯಕ್ಷತೆಯಲ್ಲಿಯೂ ಹಾಗೂ ಇತರ ಜಾತಿಗಳ ಬಗ್ಗೆ ಶ್ರೀ ಡಿ.ಕೆ. ನಾಯ್ಕರ್, ಲೋಕಸಭಾ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿಯೂ, ಕ್ರಮವಾಗಿ ಮೂರು ಉಪ ಸಮಿತಿಗಳನ್ನು ರಚಿಸಲಾಗಿದೆ.

ಈ ಮೂರು ಉಪ ಸಮಿತಿಗಳನ್ನು ವಿವಿಧ ಜಾತಿ ಮತ್ತು ಪಂಗಡಗಳು ಪ್ರಮುಖವಾಗಿ ನೆಲೆಸಿರುವ ಸ್ಥಳಗಳಿಗೆ ಭೇಟಿ ಮಾಡಿ, ಮಾಹಿತಿ ಸಂಗ್ರಹಿಸಿ, ಕೂಲಂಕುಷ ಅಧ್ಯಯನ ನಡೆಸಿ, ಶೀಘ್ರವಾಗಿ ಒಂದು ವರದಿಯನ್ನು ಮುಖ್ಯ ಸಮಿತಿಗೆ ಸಲ್ಲಿಸಲು ಕೋರಲಾಗಿತ್ತು. ಈ ಬಗ್ಗೆ ಶ್ರೀ ಡಿ.ಕೆ. ನಾಯ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು ದಿನಾಂಕ 19-4-92ರಂದು ತನ್ನ ವರದಿಯನ್ನು ಸಲ್ಲಿಸಿದೆ. ಇನ್ನೆರಡು ಉಪ ಸಮಿತಿಗಳು ತಮ್ಮ ವರದಿಗಳನ್ನು ಸಲ್ಲಿಸಿಲ್ಲ. ಕಳೆದ 2 ವರ್ಷಗಳಲ್ಲಿ ಮುಖ್ಯ ಸಮಿತಿಯು ಮೂರು ಬಾರಿ ಸಭೆ ಸೇರಿದ್ದು, ಉಪ ಸಮಿತಿಗಳು 7 ಬಾರಿ ಸಭೆಸೇರಿವೆ. ಮತ್ತು ಈ ಸಮಿತಿಯ ಸಮಿತಿಗಳ ಮುಂದೆ ಸುಮಾರು 80 ಜಾತಿಗಳವರು ತಮ್ಮನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಈಗ ಹೊಸ ಮಂತ್ರಿ ಮಂಡಲ ರಚಿತವಾಗಿರುವುದರಿಂದ, ಈ ಸಮಿತಿಯನ್ನು ಪುನರ್ ರಚಿಸಬೇಕಾಗಿದೆ. ಆದುದರಿಂದ, ಈ ಸಮಿತಿಯನ್ನು ಪುನರ್ ರಚಿಸಿ, ಸಮಿತಿಯ ಸಭೆ ಯನ್ನು ಕೂಡಲೇ ಕರೆಯುವ ವಿಪ್ಪಾಡು ಮಾಡಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಕೋರಲಾಗುವುದು. ಸಮಿತಿಯುಸರ್ಕಾರಕ್ಕೆ ಸಲ್ಲಿಸುವ ವರದಿಯನ್ನು ಪರಿಶೀಲಿಸಿ, ಅರ್ಹವೆಂದು ಕಂಡು ಬಂದ ಜಾತಿಗಳನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳೆಂದು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆಪ್ರಸ್ತಾವನೆ ಕಳುಹಿಸಿಕೊಡಲಾಗುವುದು.

8. ಗಂಗೊಳ್ಳಿ ಮೀನುಗಾರಿಕಾ ಸಹಕಾರಿ ಸಂಘದಿಂದ ಸೀಮೆ ಎಣ್ಣೆ ವಿತರಣೆಗೆ ಒತ್ತಾಯ